ಭಾರತದ ಅಸ್ತಿತ್ವಕ್ಕೆ ಸಾವಿರಾರು ವರ್ಷಗಳಿಂದ ಜೀವನದಿಯಾಗಿದ್ದ ಸಂಸ್ಕೃತದ ಅಸ್ತಿತ್ವಕ್ಕೇ ಈಗ ಅಪಾಯ ಬಂದೊದಗಿದೆ.

**ದುರಸ್ತಿ, ಅಪಾಯದ ನಿವಾರಣೆ ಹಾಗೂ ಮುನ್ನಡೆ**

ಸಂಸ್ಕೃತದ ಸ್ಥಾನವನ್ನು ವಿಸ್ತೃತವಾಗಿ ಪರಿಶೀಲಿಸಿರುವ ಮಲ್ಹೋತ್ರಾ ಅವರು ವಿಜ್ಞಾನಿಯ ಖಚಿತತೆ ಹಾಗೂ ಸುವ್ಯಸ್ಥಿತವಾದ ತರ್ಕಬದ್ಧತೆಯಿಂದ, ಆಧುನಿಕ ಸಂಶೋಧನ ವಿಧಾನದಲ್ಲಿ ವಿಶ್ಲೇಷಣೆ ನಡೆಸಿ, ಕೆಲವು ದುರಸ್ತಿಕಾರ್ಯಗಳನ್ನು ಸೂಚಿಸುತ್ತಾರೆ. ಅವುಗಳನ್ನು ಇಲ್ಲಿ ಸಂಕ್ಷೇಪವಾಗಿ ನೀಡುತ್ತೇವೆ:

ಅ) ಸಂಸ್ಕೃತವನ್ನು ಲ್ಯಾಟಿನ್, ಗ್ರೀಕ್‌ಗಳಂತೆ 'ಮೃತಭಾಷೆ'ಯ ಸಾಲಿಗೆ ಸೇರಿಸಬಾರದು. ಬದಲಾಗಿ, ಅದನ್ನು ಇಂದಿಗೂ ಜೀವಂತವಾಗಿರುವ ಹಾಗೂ ಅಷ್ಟೇ ಪ್ರಾಚೀನವಾದ ಮ್ಯಾಂಡರಿನ್(ಚೈನಾ), ಪರ್ಷಿಯನ್ ಹಾಗೂ ಅರೇಬಿಕ್ ಭಾಷೆಗಳಂತೆ ಪರಿಗಣಿಸಬೇಕು.

ಆ) ಸಂಸ್ಕೃತವನ್ನು ಕಲಿಸುವ ವಿಧಾನ ಪ್ರಾಚೀನಕಾಲದ ಋಷಿಗಳ ಪದ್ಧತಿಯಂತೆ, ಸಹಸ್ರಾರು ವರ್ಷಗಳಷ್ಟು ಕಾಲದಿಂದ ಮುಂದುವರಿದುಕೊಂಡು ಬಂದ ಮೌಖಿಕ ಪರಂಪರೆಯ ಪ್ರಕಾರ ನಡೆಯಬೇಕು. ಇದು ಮಲ್ಹೋತ್ರಾ ಅವರು ನೀಡಿರುವ ಆಶ್ಚರ್ಯಕರವೂ, ಬೋಧಪ್ರದವೂ ಆದ ಸೂಚನೆ. ಇದು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ. 'ಸಂಸ್ಕೃತ ಭಾರತಿ'ಯಂತಹ ಸಂಸ್ಥೆಗಳು ಈ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಮಗು ತಾಯಿಯಿಂದ ತನ್ನ ಮಾತೃಭಾಷೆಯನ್ನು ಕಲಿಯುವ ಹೋಲಿಕೆಯನ್ನು ಮಲ್ಹೋತ್ರಾ ಅವರು ಉದಾಹರಿಸುತ್ತಾರೆ. ಮೆಕಾಲೆ ಆರಂಭಿಸಿದ ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿ ಪ್ರಕಾರ ಮೊದಲು ವ್ಯಾಕರಣ ಕಲಿಸುವುದು, ಅನಂತರ ಭಾಷೆ ಕಲಿಸುವುದು – ಇದು ಬ್ರಿಟಿಷ್ ಪದ್ಧತಿಯಾಗಿದೆ. ಇದು ಭಾಷಾಕಲಿಕೆಯ ಸಹಜ ರೀತಿಗೆ ವಿರುದ್ಧವಾದ ಪದ್ಧತಿಯಾಗಿದೆ.

ಇ) ಭಾರತ ಹಾಗೂ ಇಡೀ ಜಗತ್ತು ಸಂಸ್ಕೃತದ 'ಅನುವಾದಿಸಲಾಗದ' ಪದಗಳನ್ನು ಅರಿತುಕೊಳ್ಳಬೇಕೆಂದು ಮಲ್ಹೋತ್ರಾ ಅವರು ಪ್ರತಿಪಾದಿಸುತ್ತಾರೆ. ಅವುಗಳ ಅನುವಾದದಿಂದ ಪಾಶ್ಚಾತ್ಯ ವಿದ್ವಾಂಸರು ಹಲವು ಬಾರಿ ತಪ್ಪುಕಲ್ಪನೆಗೆ, ದುರ್ಬಳಕೆಗೆ ದಾರಿ ಮಾಡಿಕೊಡುತ್ತಾರೆ. ಇಂಥ ಶಬ್ದಗಳ ಒಂದು ಸಂಗ್ರಹವನ್ನು ಹೊರತರಬೇಕು.

ಈ) ಇನ್ನೊಂದು ಮುಖ್ಯ ಸಲಹೆಯೆಂದರೆ, ವಿಶ್ವಕೋಶಗಳಂತಿರುವ ಪ್ರಾಚೀನಕಾಲದ ವಿವಿಧ ಶಾಸ್ತ್ರಗಳಲ್ಲಿ ತರಬೇತಿ ನೀಡಬೇಕು, ಹಾಗೂ ಅವು ಸಂಸ್ಕೃತ ಭಾಷೆಯಲ್ಲಿ ಹೇಗೆ ಅಂತರ್ಗತವಾಗಿವೆ ಎಂಬುದನ್ನು ತಿಳಿಸಿಕೊಡಬೇಕು. ಭೌತಶಾಸ್ತ್ರ, ನೈಸರ್ಗಿಕ ವಿಜ್ಞಾನ, ಗಣಿತ, ವಾಸ್ತು, ವೈದ್ಯವಿಜ್ಞಾನ, ಮಂತ್ರಶಾಸ್ತ್ರ ಮೊದಲಾದ ಕ್ಷೇತ್ರಗಳಲ್ಲಿ ಪರಿಣತಿ ಹೊಂದುವಂತೆ ಅವುಗಳನ್ನು ಕಲಿಸಬೇಕು. ಆಧುನಿಕ ಸಂದರ್ಭಗಳಲ್ಲಿ ಇವುಗಳನ್ನು ಪರೀಕ್ಷಿಸಿ, ಅವುಗಳ ವೈಚಾರಿಕ ಹಾಗೂ ಪ್ರಾಯೋಗಿಕ ಉಪಯೋಗವನ್ನು ನವೀಕರಿಸಬೇಕು.

ಉ) 'ರಾಜಕೀಯ ಭಾಷಾಶಾಸ್ತ್ರ' ಅಥವಾ 'ಮುಕ್ತ ಭಾಷಾಶಾಸ್ತ್ರ' (Political/Liberal Philology) ವನ್ನು ಎದುರಿಸುವ ಹಾಗೂ ಪ್ರತಿಭಟಿಸಿ ನಿಲ್ಲುವ ಅನಿವಾರ್ಯತೆ ಬಂದೊದಗಿದೆ ಎಂದು ಮಲ್ಹೋತ್ರಾ ಅವರು ತಿಳಿಸುತ್ತಾರೆ. ಇದನ್ನು ಮುಂದಿಡುವ ಮೂಲಕ 'ಸೆಕ್ಯುಲರಿಸ್ಟ್' ವಾದಿಗಳು ಹಾಗೂ ಆಧುನಿಕ ಎಡಪಂಥೀಯರು ಧಾರ್ಮಿಕ ಮೂಲಭೂತವಾದಕ್ಕೆ ತಪ್ಪು ವಿಚಾರವಾದದ ಮುಖವಾಡ ತೊಡಿಸುತ್ತಾರೆ. ಇವು ಮಲ್ಹೋತ್ರಾ ಅವರು ಮಂಡಿಸುವ ಕೆಲವು ಕಾರ್ಯವಿಧಾನಗಳು. ಅವರು ಈಗಾಗಲೇ ತಮ್ಮ 'Being Different' ಗ್ರಂಥದ ಮೂಲಕ ಈ ಪುನರುತ್ಥಾನ ಕಾರ್ಯದ ವಿಧಾನಗಳಿಗೆ ಹಾಗೂ ಮೂಲಭೂತ ಕಾರ್ಯಕ್ಕೆ ಅಡಿಪಾಯ ಹಾಕಿದ್ದಾರೆ.

ಅತ್ಯಂತ ಪ್ರಧಾನವಾಗಿ ಇಲ್ಲಿ ಉಲ್ಲೇಖಿಸಬೇಕಾದ ಸಂಗತಿಯೆಂದರೆ, ಮಲ್ಹೋತ್ರಾ ಅವರು ಸೂಚಿಸುವ ಕಾರ್ಯವಿಧಾನ. ಪಾಶ್ಚಾತ್ಯ ವಿದ್ವಾಂಸರು ಬಳಸುವ ರಾಜಕೀಯ ಭಾಷೆ, ರಾಜಕೀಯ ಅಸ್ತ್ರಗಳನ್ನು ಸಮರ್ಥವಾಗಿ ಎದುರಿಸಲು ಅದೇ ಅಸ್ತ್ರಗಳನ್ನು ಹಾಗೂ ತಂತ್ರ ಗಳನ್ನು ಬಳಸಬೇಕು; ಆ ಮೂಲಕ ಭಾರತದ ಜೀವನಾಡಿಯಾದ ಸಂಸ್ಕೃತವನ್ನು ಪುನರುಜ್ಜೀವನಗೊಳಿಸಬೇಕು, ಮರುಸ್ಥಾಪನೆ ಮಾಡಬೇಕು. ಇದಕ್ಕೆ ಸಾಂಪ್ರದಾಯಿಕ ಸಂಸ್ಕೃತ ವಿದ್ವಾಂಸರ ಸಹಕಾರದೊಂದಿಗೆ ಬೃಹತ್‌ಪ್ರಮಾಣದ ಕಾರ್ಯವನ್ನು ಆರಂಭಿಸಬೇಕಾಗಿದೆ ಎನ್ನುವ ಮಲ್ಹೋತ್ರಾ ಅವರು, ಈ ದಿಕ್ಕಿನಲ್ಲಿ ವಿಸ್ತಾರವಾದ ಕಾರ್ಯಸೂಚಿಯನ್ನು ತಯಾರಿಸಿದ್ದಾರೆ.

**ಉಪಸಂಹಾರ :** ಒಟ್ಟಿನಲ್ಲಿ ಭಾರತದ ಒಳಿತಿಗಾಗಿ, ಅದರ ಉಜ್ವಲ ಭವಿಷ್ಯಕ್ಕಾಗಿ ಸಂಸ್ಕೃತದ ಮರುಸ್ಥಾಪನೆಯಾಗುವಲ್ಲಿ ಈ ಬಗೆಯ ಒಂದು ಚಿಂತನೆ ಅತ್ಯಂತ ಮಹತ್ವದ್ದಾಗಿದೆ. The Battle for Sanskrit ಕೃತಿ ಏಕೆ ಮುಖ್ಯವಾಗುತ್ತದೆ ಎಂದರೆ, ಅದು ಸಮಸ್ಯೆಗಳನ್ನು ಗುರುತಿಸುವುದು ಮಾತ್ರವಲ್ಲದೆ, ಅದಕ್ಕೆ ಅಗತ್ಯವಾಗಿ ಆಗಬೇಕಾದ ಪರಿಹಾರಗಳು ವಿದ್ವಾಂಸರ, ಶಿಕ್ಷಣ ತಜ್ಞರ, ರಾಜಕೀಯ ಇಲಾಖೆಗಳ ಹಾಗೂ ನಿರ್ಣಾಯಕ ತೀರ್ಮಾನಗಳನ್ನು ಕೈಗೊಳ್ಳುವ ಆಡಳಿತ ವರ್ಗದವರ ಕೈಯಲ್ಲಿದೆ ಎಂದು ಎತ್ತಿ ತೋರಿಸುತ್ತದೆ. ಸಂಸ್ಕೃತ-ಭಾರತ-ಸನಾತನ ಧರ್ಮವನ್ನು ವಿಶ್ವಸಂಸ್ಕೃತಿಯ ಒಂದು ಪ್ರಧಾನ ಅಂಗವಾಗಿ ಗುರುತಿಸುವ ಈ ಕೃತಿಯಲ್ಲಿ 'ಅಸಹನೆ', 'ಮೂಲಭೂತವಾದ' ಎಂದು ಹೇಳಬಹುದಾದ ಒಂದೇ ಒಂದು ಪದವಾಗಲೀ, ಸೂಚನೆಯಾಗಲೀ ಇಲ್ಲ. ಇಲ್ಲಿ ಎಲ್ಲವೂ Being Different ಆಗಿರುವ ಪ್ರಯತ್ನವಾಗಿದೆ. ಈ ಗ್ರಂಥ ಇಲ್ಲಿ ಬಯಸುವುದು ಸಂಸ್ಕೃತವನ್ನು ಅಭ್ಯಸಿಸುವ ಹಾಗೂ ಅದನ್ನು ಪ್ರೋತ್ಸಾಹಿಸುವವರು ಶ್ರದ್ಧೆ ಹೊಂದಿರಬೇಕು ಎಂದು ಮಾತ್ರ. ಎಲ್ಲ ವಿದ್ಯಾಸಂಸ್ಥೆಗಳು, ಗ್ರಂಥಾಲಯಗಳು ಸಾರ್ವಜನಿಕ ವೇದಿಕೆಗಳು, ಸಂಸ್ಥೆಗಳು ಈ ಕೃತಿಯನ್ನು ಅಗತ್ಯವಾಗಿ ಹೊಂದಿರಬೇಕೆಂದು ನಾವು ಬಯಸುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ, ಶಿಕ್ಷಣ ತಜ್ಞರು, ಸಂಶೋಧಕರು, ಹಾಗೂ ಸಾರ್ವಜನಿಕರು ಈ ಕೃತಿಯನ್ನು ಓದಬೇಕು. ಮಲ್ಹೋತ್ರಾ ಅವರ ವಿದ್ವತ್ತು, ವಿಷಯ ಮಂಡನೆಯ ಶಿಸ್ತುಬದ್ಧತೆ, ಅಧ್ಯಯನ - ವಿಶ್ಲೇಷಣೆಗಳ ವಿಧಾನದಲ್ಲಿನ ಖಚಿತತೆ, ಯಾರೇ ಆದರೂ ಮುಂದೆ ಬಂದು ಪೂರ್ವಪಕ್ಷ ಮಂಡನೆ ಮಾಡಬಹುದಾದ ಮುಕ್ತ ಆಹ್ವಾನ - ಈ ವಿಷಯದಲ್ಲಿ ನಾವು ಭರವಸೆ ಹೊಂದಬಹುದು. ಇದು ವಸ್ತುನಿಷ್ಠ ಲೇಖಕರ ಹಾಗೂ ವಿದ್ವಾಂಸರ ಪಾಲಿಗೆ ಒಂದು ಅಪೂರ್ವ ಕೊಡುಗೆಯಾಗಿದೆ.

ವಿಶೇಷ ಲೇಖನ

# ಸಾಧುವೊಬ್ಬನ ಚೀನಾ ಪರ್ಯಟನೆ

## ಭಾಗ ೨

ಇಂಗ್ಲಿಷ್ ಮೂಲ: **ಸ್ವಾಮಿ ದುರ್ಗಾನಂದ**

ಅನುವಾದ: **ಪ್ರೊ . ಕೆ.ಬಿ. ಪ್ರಭುಪ್ರಸಾದ್**



ಈ ಲೇಖನದ ಮೊದಲ ಭಾಗದಲ್ಲಿ ಚೀನಾದ ರೈಲು ಗಾಡಿಗಳು, ಬಸ್ಸುಗಳು, ಮಾಲ್‌ಗಳು, ರಸ್ತೆಗಳು, ಉದ್ಯಾನಗಳು ಮುಂತಾದ ನಾಗರಿಕ ಸೌಲಭ್ಯಗಳ ಬಗ್ಗೆ, ಪ್ರಗತಿಯ ಬಗ್ಗೆ ತಿಳಿಸಿದ್ದಾಯಿತು. ಈ ಎರಡನೆ ಭಾಗದಲ್ಲಿ ಚೀನಾದ ಧಾರ್ಮಿಕ ಮುಖವನ್ನಷ್ಟು ನೋಡೋಣ.

ಚೀನಾದೇಶದಲ್ಲಿ ಮೂರು ಮುಖ್ಯ ಧರ್ಮಗಳಿವೆ: ಬೌದ್ಧ ಧರ್ಮ, ತಾವೋ ಧರ್ಮ ಮತ್ತು ಕನ್ಫ್ಯೂಷಿಯಸ್ ಧರ್ಮ. ಈ ಮೂರೂ ಧರ್ಮವಾಹಿನಿಗಳು ಜೊತೆಜೊತೆಯಾಗಿದ್ದು ಒಂದಕ್ಕೊಂದು ಪೂರಕವಾಗಿವೆ. ಕಾಕತಾಳೀಯವೆಂಬಂತೆ ಇವೆಲ್ಲವೂ ಕ್ರಿ.ಪೂ. ೬ನೆ ಶತಮಾನದಲ್ಲಿ ಏಕಕಾಲೀನವಾಗಿ ಆರಂಭವಾದವು. ಕಾರ್ಲ್ ಜಾಸ್‌ಪರ್ಸ್ ಎಂಬ ಜರ್ಮನ್ ತತ್ತ್ವಜ್ಞಾನಿ ಈ ಕಾಲವನ್ನು ಏಕ್ಸಿಯಲ್ ಯುಗದ (ಕ್ರಿ.ಪೂ. ೮೦೦ ರಿಂದ ೨೦೦) ಮಧ್ಯಭಾಗ ಎನ್ನುತ್ತಾನೆ. ಇದೇ ಕಾಲಮಾನದಲ್ಲಿ ಪರ್ಶಿಯಾ, ಭಾರತ, ಚೀನಾ ಮತ್ತು ಪಾಶ್ಚಾತ್ಯದೇಶಗಳಲ್ಲಿ ಧಾರ್ಮಿಕ ಜಾಗೃತಿಯಾಯಿತು.

### ಕನ್ಫ್ಯೂಷಿಯನ್ ಧರ್ಮ

ಇದೊಂದು ಧರ್ಮ ಎನ್ನುವುದಕ್ಕಿಂತ ಒಂದು ತತ್ತ್ವ ಎನ್ನುವುದು ಸರಿ. ಕನ್ಫ್ಯೂಷಿಯಸ್ ಎಂಬಾತ ಕ್ರಿ.ಪೂ. ೫೫೧ – ೪೭೯ರಲ್ಲಿದ್ದವನು. ಕಾಂಗ್‌ಚೆ, ಕಂಫ್ಯೂಜಿ ಎಂದೂ ಕರೆಯುತ್ತಾರೆ. ಅವನೊಬ್ಬ ರಾಜಕಾರಣಿ, ತತ್ತ್ವಜ್ಞಾನಿ. ಈತ ಹುಟ್ಟಿದ್ದು, ರಾಜ್ಯಗಳ ಅಂತಃಕಲಹದ ಯುಗ ಎಂದು ಚೀನೀ ಇತಿಹಾಸಕಾರರು ಕರೆಯುವ ಕಾಲಕ್ಕೆ ಸ್ವಲ್ಪ ಮುಂಚೆ. ಪ್ರಬಲರಾಗಿದ್ದ ಝೌ ರಾಜವಂಶದವರ ಆಳ್ವಿಕೆಯು ಮುಗಿದು ಸಣ್ಣಪುಟ್ಟ ಸಾಮಂತರಾಜರು ಪರಮಾಧಿಕಾರಕ್ಕಾಗಿ ಪರಸ್ಪರ ಪೈಪೋಟಿಯಿಂದ ಕಾದಾಡುತ್ತಿದ್ದ ಕಾಲ. ಅದು ನೈತಿಕ ಅಧಃಪತನದ ಕಾಲ. ಕನ್ಫ್ಯೂಷಿಯಸ್ ಲೂ ರಾಜ್ಯದಲ್ಲಿ (ಈಗಿನ ಕ್ಯೂಫು) ನ್ಯಾಯಾಧೀಶನಾಗಿದ್ದ. ಕಾನೂನು ಸಚಿವನಾದ. ಪ್ರತಿಭಾಶಾಲಿ ಚಿಂತಕನಾಗಿದ್ದ ಈತ ಆಳರಸರು ತನ್ನ ಧರ್ಮಯುತ ವಿಚಾರಗಳಿಗೂ ಬೋಧನೆಗಳಿಗೂ ಕಿವಿಗೊಡುತ್ತಿಲ್ಲವೆಂದು ಬೇಸರಗೊಂಡು ರಾಜ್ಯತ್ಯಾಗ ಮಾಡಿ ಬೇರೆ ಪಾಳೆಯಗಾರ ನಾಡಿಗೆ ಸೇವೆ ಸಲ್ಲಿಸಲು ಹೊರನಡೆದ. ಆದರೆ ಅಲ್ಲಿಯೂ ಅದೇ ಪ್ರತಿಕೂಲ ಪರಿಸ್ಥಿತಿಯಿದ್ದುದರಿಂದ ವಿಫಲನಾಗಿ ತನ್ನ ನಾಡಿಗೆ ಹಿಂತಿರುಗಿದ. ಅವನ ಜೀವಿತಕಾಲದಲ್ಲಿ ಆತನನ್ನು ಬೆಂಬಲಿಸುವವರ ಸಂಖ್ಯೆ ಮೂರು ಸಾವಿರಕ್ಕೇರಿತು.[೧]

ಕನ್ಫ್ಯೂಷಿಯಸ್‌ನ ತತ್ತ್ವ ನೈತಿಕ ಹಾಗೂ ಸಮಾಜೋ-ರಾಜಕೀಯವಾದುದು. ಮಾನವೀಯತೆ, ನ್ಯಾಯಪರತೆ, ಜ್ಞಾನ, ಚಾರಿತ್ರ್ಯ, ಸದ್ವರ್ತನೆ, ಪ್ರಾಮಾಣಿಕತೆ, ವಿನಯ ಮತ್ತು ಸಭ್ಯತೆ ಇತ್ಯಾದಿ ಮೌಲ್ಯಗಳಿಂದ ಕೂಡಿದುದು. ಇದು ಚೀನೀ ಪರಂಪರೆಗೆ ಭದ್ರವಾದ ತಳಹದಿ. ಕೌಟುಂಬಿಕ ನಿಷ್ಠೆ, ಹಿರಿಯರ ಬಗ್ಗೆ ಗೌರವ, ಪಿತೃಪೂಜೆ, ಇತ್ಯಾದಿಗಳಲ್ಲಿ ಅವರಿಗೆ ನಂಬಿಕೆ.

ಇತರರು ನಿಮ್ಮೊಡನೆ ಯಾವ ರೀತಿ ನಡೆದುಕೊಳ್ಳುವುದು ನಿಮಗೆ ಇಷ್ಟವಾಗುವುದಿಲ್ಲವೋ ಹಾಗೆ ನೀವು ಇತರರೊಡನೆ ನಡೆದುಕೊಳ್ಳಬೇಡಿ.[೨] ನಮಗೆ ಮೂರು ವಿಧಗಳಲ್ಲಿ ಜ್ಞಾನವುಂಟಾಗುತ್ತದೆ. ಮೊದಲಿನದು ಆಲೋಚನೆ ಮಾಡುವುದರಿಂದ. ಎರಡನೆಯದು ಅನುಕರಣೆಯಿಂದ. ಮೂರನೆಯದು, ಸ್ವಾನುಭವದಿಂದ. ಆದರೆ ಇದು ಬಹು ಕಹಿಯಾಗಿರುತ್ತದೆ. ಕೇಳಿದ್ದು ಮರೆತು ಹೋಗುತ್ತದೆ, ನೋಡಿದ್ದು



ಕನ್ಫ್ಯೂಷಿಯಸ್

೧ ಕನ್ಫ್ಯೂಷಿಯಸ್(೧೯೬೮) '*ದ ನ್ಯೂ ಎನ್‌ಸೈಕ್ಲೋಪೀಡಿಯಾ ಅಮೆರಿಕಾನ*' ೩೦ ಸಂಪುಟಗಳು (ಅಂತರಾಷ್ಟ್ರೀಯ ಆವೃತ್ತಿ., ಸಂಪುಟ ೭, ಪು. ೫೪೦, ಡ್ಯಾನ್‌ಬರಿ ಸಿ.ಟಿ.ಗ್ರೋಲಿಯರ್.

೨. ಬೈಬಲ್‌ನ ಸುವರ್ಣಸೂತ್ರವನ್ನಿದು ನೆನಪಿಗೆ ತರುತ್ತದೆ: ''ಯಾವುದನ್ನು ಇತರರು ನಿನಗೆ ಮಾಡಬೇಕೆಂದು ನೀನು ಬಯಸುವೆಯೊ, ಅದನ್ನು ಅವರಿಗೆ ಮಾಡು.'' ಪ್ರಸಿದ್ಧ ಹಿಂದೂ ಸೂಕ್ತಿಯಾದ, ''ಆತ್ಮನಃ ಪ್ರತಿಕೂಲಾನಿ ಪರೇಶಾನ್ ನ ಸಮಾಚರೇತ್'' *(ಮಹಾಭಾರತ ೫.೧೫.೧೭)* – 'ಅಂದರೆ ಯಾವುದು ನಿನ್ನ ಒಳಿತಿಗೆ ಪ್ರತಿಬಂಧಕವೆಂದು ಭಾವಿಸುವೆಯೋ ಅದನ್ನು ನೀನು ಇತರರಿಗೆ ಮಾಡಬೇಡ' ಎಂಬುದೂ ಇಲ್ಲಿ ನೆನಪಾಗುತ್ತದೆ.

ನೆನಪಿರುತ್ತದೆ. ಮಾಡಿದ್ದು  ಅರಿವನ್ನುಂಟು ಮಾಡುತ್ತದೆ. ಇಂತಹ ಸೂಕ್ತಿಗಳು ಅವನ ಪ್ರಸಿದ್ಧ ಮಾತುಗಳು.

ಹಾನ್ ಮನೆತನದ ಅರಸರ ಕಾಲದಲ್ಲಿ (ಕ್ರಿ.ಪೂ. ೭೬೦ – ಕ್ರಿ.ಶ. ೨೨೦) ಕನ್ಫ್ಯೂಷಿಯಸ್‌ನ ತತ್ತ್ವಗಳೇ ಅಧಿಕೃತವಾದ ಆದರ್ಶ ರಾಜ್ಯಶಾಸನಗಳಾದವು. ಇವು ವಿಶ್ವಮಾನ್ಯ ಮೌಲ್ಯಗಳಾಗಿ ವಿಕಾಸಗೊಂಡದ್ದೂ ಈ ಕಾಲದಲ್ಲೇ. ಆದರೆ ಮುಂದೆ ರಾಜರಿಂದಲೇ ಇವು ತಿರಸ್ಕೃತವಾದವು. ಈ ಧರ್ಮಕ್ಕೆ ಪ್ರತಿಯಾಗಿ, ಕೆಲವು ಬಾರಿ ಆಗಾಗ – ತಾವೋಧರ್ಮ ರಾಜಪೋಷಿತವಾಯಿತು.

ಚೀನಾದ ಎಲ್ಲ ಕಡೆ ಕನ್ಫ್ಯೂಷಿಯಸ್ ದೇವಸ್ಥಾನಗಳಿವೆ. ಅಲ್ಲಿ ಕನ್ಫ್ಯೂಷಿಯಸ್‌ನನ್ನೇ ಆರಾಧಿಸುತ್ತಾರೆ. ಅವನ ಉಪದೇಶ, ಗ್ರಂಥ, ಸಂಪ್ರದಾಯಗಳನ್ನು ಅಲ್ಲಿ ರಕ್ಷಿಸಿಟ್ಟಿದ್ದಾರೆ. ಆಡಳಿತ ಸೇವಾ ಪರೀಕ್ಷೆಗಳಿಗೆ ಈ ದೇವಸ್ಥಾನಗಳೇ ಕೇಂದ್ರಗಳು. ರಾಜ್ಯಶಾಸನ ಮತ್ತು ರಾಜ್ಯಾಡಳಿತ ಹೇಗಿರಬೇಕು ಎಂಬುದನ್ನೆಲ್ಲ ಕನ್ಫ್ಯೂಷಿಯಸ್ ಬರೆದಿಟ್ಟ. ಕನ್ಫ್ಯೂಷಿಯಸ್ ದೇವಸ್ಥಾನಗಳ ಆವರಣಗಳು (ಕ್ಯಾಂಪಸ್) ವಿಸ್ತಾರವಾಗಿ ಇವೆ. ಕೆಲವು ಪರಂಪರಾಗತ ಐತಿಹಾಸಿಕ ಸ್ಥಳಗಳಾಗಿ ಹೆಸರಾಗಿವೆ. ಕನ್ಫ್ಯೂಷಿಯಸ್‌ನ ತತ್ತ್ವ ಮತ್ತು ಚೀನೀ ಸಂಪ್ರದಾಯಗಳು ಎರಡೂ ಇಲ್ಲಿ ಮಿಳಿತವಾಗಿವೆ. ಇಲ್ಲಿ ಜೀವನ್ಮುಕ್ತಿ, ದೈವಿಕತೆಗಳ ಬದಲು ಲೌಕಿಕ ಬದುಕನ್ನು ಉತ್ತಮಗೊಳಿಸುವುದೇ ಮುಖ್ಯ. ಏಕೆಂದರೆ ಈ ಧರ್ಮದ ತತ್ತ್ವವೇ ಐಹಿಕ ಜೀವನವನ್ನು ಪವಿತ್ರಗೊಳಿಸುವ ದೃಷ್ಟಿಯಾಗಿದೆ; ಪ್ರಾಪಂಚಿಕತೆಯ ಪರಿತ್ಯಾಗವಲ್ಲ. ಇಲ್ಲಿ ಮಠಗಳಿಲ್ಲ, ಸ್ವಾಮಿಗಳಿಲ್ಲ, ಪುರೋಹಿತರಿಲ್ಲ. ಈ ಮಂದಿರಗಳನ್ನು ಸರ್ಕಾರ ಮತ್ತು ಕನ್ಫ್ಯೂಷಿಯಸ್ ತತ್ತ್ವದ ಉತ್ಕಟಾಭಿಮಾನಿಗಳು ನಡೆಸುತ್ತಿರುವರು.

ಕ್ಯೂ ಫು (ಕನ್ಫ್ಯೂಷಿಯಸ್ ಹುಟ್ಟಿದ ಸ್ಥಳ) ನಗರದಲ್ಲಿರುವ ಕನ್ಫ್ಯೂಷಿಯಸ್ ದೇವಸ್ಥಾನ ಬಹು ಪ್ರಸಿದ್ಧವಾದುದು. ಇದು ೧.೩ ಕಿ.ಮೀ ಉದ್ದದ, ೯ ದೊಡ್ಡ ಹಜಾರಗಳೂ ೪೬೬ ಕೊಠಡಿಗಳೂ ೫೪ ದ್ವಾರಬಾಗಿಲುಗಳೂ ಇರುವ ಬಹುದೊಡ್ಡ ದೇವಸ್ಥಾನ. ನ್ಯಾನ್‌ಜಿಂಗ್‌ನಲ್ಲಿರುವ ಫ್ಯೂಜಿಮಿಯಾವೊ ಕನ್ಫ್ಯೂಷಿಯಸ್ ಮಂದಿರ ೧ ಚ.ಮೀ. ವಿಸ್ತೀರ್ಣವುಳ್ಳ ಕ್ಯಾಂಪಸ್; ಚೀನೀ ಪರಂಪರೆ – ರಾಜ್ಯಾಡಳಿತಗಳಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳಿಂದ ತುಂಬಿದೆ. ಆದರೆ ಇದರಲ್ಲಿರುವ ಕನ್ಫ್ಯೂಷಿಯಸ್ ಮಂದಿರ ತುಂಬಾ ಚಿಕ್ಕದು. ೧೪ x ೨೦ ಮೀ = ೨೮೦ ಚ. ಮೀ. ಅಳತೆಯ ಕಟ್ಟಡ ಅಷ್ಟೆ.

## ತಾವೋ ಧರ್ಮ

ತಾವೋ ಧರ್ಮದ ಮೂಲಪುರುಷ ಲಾವೋತ್ಸು (ಲಾವೋತ್ಸೆ ಅಥವಾ ಲಾವೋಜಿ) ಕ್ರಿ.ಪೂ. ೬ನೆ ಇಲ್ಲವೆ ೫ನೆ ಶತಮಾನದಲ್ಲಿದ್ದವನು. ಝೌ ವಂಶದ ಅರಸನ[೩] ಆಸ್ಥಾನದಲ್ಲಿ ಸರ್ಕಾರಿ ಪುರಾತತ್ತ್ವ ದಾಖಲೆಗಳ ಭಂಡಾರಿಯಾಗಿದ್ದ. ರಾಜ್ಯದಲ್ಲಿ ನೈತಿಕ ಅಧಃಪತನವನ್ನು ಕಂಡು ಬೇಸರಗೊಂಡು, ನೀರಕೋಣವನ್ನೇರಿ ರಾಜ್ಯದ ಪಶ್ಚಿಮ ಗಡಿಯಿಂದಾಚೆಯ ವನಾಂತರದಲ್ಲಿ ಸಾಧುಜೀವನವನ್ನು ನಡೆಸಲು ಹೊರಟನೆಂದು ಪ್ರತೀತಿಯಿದೆ. ಕೋಟೆಯ ಹೆಬ್ಬಾಗಿಲನ್ನು ದಾಟುವಾಗ ದ್ವಾರಪಾಲಕ ಅವನನ್ನು ಈ ಆಸ್ಥಾನದಲ್ಲಿದ್ದ ಜ್ಞಾನಿಯೆಂದು ಗುರುತಿಸಿ, ಅಲ್ಲಿದ್ದ ಪುಸ್ತಕದಲ್ಲಿ ತನ್ನ ಚಿಂತನೆಗಳನ್ನು ಬರೆದಿಡಬೇಕೆಂದು ಅವನನ್ನು ಕೇಳಿಕೊಂಡ. ಅದರಂತೆ ಲಾವೋತ್ಸೆ ಬರೆದಿಟ್ಟ. ದ್ವಾರಪಾಲಕನೆ ಆತನ ಪ್ರಥಮ ಶಿಷ್ಯನಾದ. ಇಬ್ಬರೂ ಜೊತೆಗೂಡಿ ಕಾಡಿನ ಏಕಾಂತದಲ್ಲಿ ಸಾಧುಜೀವನ ನಡೆಸಲು ಹೊರಟುಹೋದರು. ಮತ್ತೆ ಅವರನ್ನಾರೂ ಕಾಣಲಿಲ್ಲ.

ಈ ಬರೆಹವೆ ಸುಪ್ರಸಿದ್ಧ 'ತಾವೊ ತೆ ಚಿಂಗ್.' ಇದರಲ್ಲಿ ಕೇವಲ ಐದು ಸಾವಿರ ಚೀನೀ ಅಕ್ಷರಗಳಿವೆ. ೮೧ ಚಿಕ್ಕ ಅಧ್ಯಾಯಗಳಿವೆ. ಇದರ ಮುಖ್ಯವಸ್ತು ವರ್ಣನಾತೀತವಾದ ತಾವೊ (ದಾವೊ ಎಂದೂ ಉಚ್ಚರಿಸುತ್ತಾರೆ).[೪] ತಾವೊ ಎಂದರೆ ಅತೀತನೂ, ಸರ್ವಾಂತರ್ಯಾಮಿಯೂ ಆದ 'ಪರಬ್ರಹ್ಮ' ಎಂದೇ ಅರ್ಥ; ಜಡ, ಚೇತನ ಅವಸ್ಥೆಗಳಲ್ಲಿರುವ ಏಕಮೇವ ಶಕ್ತಿ. ಉದಾಹರಣೆಗೆ ತಾವೊ ತೆ ಚಿಂಗ್ ಹೇಳುತ್ತದೆ:[೫] ''ವರ್ಣನೆಗೆ ನಿಲುಕುವ ತಾವೊ ನಿತ್ಯವೂ ಅವಿನಾಶಿಯಾದ ತಾವೊ ಅಲ್ಲ. ಮಾತಿಗೊಳಗಾದ ನಾಮ ಅವಿನಾಶಿಯಾದ ನಾಮವಲ್ಲ.'' *(ಅಧ್ಯಾಯ ೧)*



ಲಾವೋ ತ್ಸು

''ವಾಸ್ತವ ಮತ್ತು ನಿಗೂಢತೆ ಎರಡರ ಮೂಲ ಒಂದೆ. ಮೂಲ ಅಜ್ಞಾನದ ಕತ್ತಲು. ಕತ್ತಲಿನಿಂದ ಹುಟ್ಟಿದ ಕತ್ತಲೆಯೇ ಎಲ್ಲ ಜ್ಞಾನದ ಉಗಮ'' *(ಅಧ್ಯಾಯ ೧)*

ಈ ವಾಕ್ಯ ಮತ್ತು ಕೆಳಕಂಡ ಸಾಲುಗಳು ವೇದಗಳಲ್ಲಿನ ನಾಸದೀಯ ಸೂಕ್ತವನ್ನು ನೆನಪಿಗೆ ತರುತ್ತವೆ:

ತಾವೊ ಒಂದು ಖಾಲಿ ಪಾತ್ರೆಯಂತೆ
ಅದನ್ನು ಖಾಲಿ ಮಾಡಲೂ ಆಗುವುದಿಲ್ಲ
ತುಂಬುವುದಕ್ಕೂ ಆಗುವುದಿಲ್ಲ ;
ಅದರ ಆಳ ಅನಂತವಾದುದು;
ಎಲ್ಲಕ್ಕೂ ಅದೇ ಮೂಲ;
ಅದು ಗುಪ್ತವಾದುದು ಆದರೆ ಯಾವಾಗಲೂ ಇರುವಂತಹುದು

ಅದಕ್ಕೆ ಜನ್ಮವಿತ್ತವರು ಯಾರೋ ನನಗೆ ತಿಳಿಯದು
ದೇವರ ಪರಿಕಲ್ಪನೆಗಿಂತ ಹಳೆಯದು *(ಅಧ್ಯಾಯ ೪)*

ವಿಶ್ವ ಹುಟ್ಟುವ ಮೊದಲು ಪೂರ್ಣವಾದುದು
ಆದರೆ ಭಿನ್ನ ಮಾಡಲಸಾಧ್ಯವಾದುದು ಒಂದಿತ್ತು
ಅದು ತಾನೆ ತಾನಾಗಿತ್ತು ಮತ್ತು ಬಯಲೆ ಆಗಿತ್ತು
ಏಕೈಕವಾಗಿತ್ತು ಮತ್ತು ಬದಲಾಗದಂತಿತ್ತು;
ಅದು ನಿತ್ಯವಾದುದು, ಭದ್ರವಾದುದು
ವಿಶ್ವಕ್ಕೆ ಜನ್ಮ ಕೊಟ್ಟ ತಾಯಿ ಎನ್ನಬಹುದು
ಏಕೆಂದರೆ ನನಗದರ ಹೆಸರೇ ತಿಳಿಯದು;
ಅದಕ್ಕೊಂದು ಹೆಸರನ್ನು ಕೊಡಲೇಬೇಕಾದಲ್ಲಿ

---

೩. ತಾವೊಯಿಸಂ (೧೯೯೮), *ದ ಎನ್‌ಸೈಕ್ಲೋಪೀಡಿಯಾ ಅಮೆರಿಕಾನ* ದ ೩೦ ಸಂಪುಟಗಳು, ಅಂತರರಾಷ್ಟ್ರೀಯ ಆವೃತ್ತಿ, ಸಂಪುಟ ೨೬, ಪುಟ ೨೭೬, ಡ್ಯಾನ್‌ಬರಿ ಅ ಖಿ ಗ್ರೋಲಿಯರ್.

೪. ಎನ್‌ಸೈಕ್ಲೋಪೀಡಿಯಾ ಅಮೆರಿಕಾನ, ಎನ್‌ಸೈಕ್ಲೋಪೀಡಿಯಾ ಆಫ್ ರಿಲಿಜನ್ ಅಂಡ್ ಎಥಿಕ್ಸ್ ಮತ್ತು ನ್ಯೂ ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾ.

೫. ಲಾವೋ ತ್ಸೆ, *ತಾವೊ ತೆ ಚಿಂಗ್,* ಆಂಗ್ಲ ಅನು. ಜಾನ್ ಹೆಚ್. ಮೆಕ್‌ಡೊನಾಲ್ಡ್, (ಲಂಡನ್, ಆರ್ಕ್‌ಟೂರಸ್ ಪಬ್ಲಿಷಿಂಗ್ ಲಿ., ೨೦೦೯)

ಅದನ್ನು ತಾವೋ ಎಂದು ಕರೆಯುತ್ತೇನೆ
ಅದನ್ನು 'ಮಹಾನ್'[೬] ಎಂದು ಕರೆಯಲಿಷ್ಟಪಡುತ್ತೇನೆ *(ಅಧ್ಯಾಯ ೨೫)*

ತಾವೊ ನಾಮರಹಿತವಾದುದು, ಬದಲಾಗದಂತಹದು:
ನಿಕೃಷ್ಟವೆಂಬಂತೆ ಕಂಡರೂ
ಜಗತ್ತಿನಲ್ಲಿ ಯಾವುದೂ ಅದನ್ನಿಟ್ಟುಕೊಳ್ಳಲಾರದು,[೭] *(ಅಧ್ಯಾಯ ೩೨)*

ಹೀಗೆ ತಾವೊ ಸತ್ಯವೂ ಹೌದು ತತ್ತ್ವವೂ ಹೌದು; ಆಧ್ಯಾತ್ಮಿಕ ನೀತಿ ಮಾತ್ರವಲ್ಲ ಜೀವನದ ಮಾರ್ಗವೂ ಸಹ. ತಾವೊ ಎಂಬುದನ್ನು ಗ್ರೀಕ್ ತತ್ತ್ವಶಾಸ್ತ್ರದ[೮] logos ಹಾಗೂ ಭಾರತೀಯ ತತ್ತ್ವಶಾಸ್ತ್ರದ 'ಋತ'ಕ್ಕೆ ಹೋಲಿಸಬಹುದು. ಇದನ್ನು ೧೯೮೫ರ ಮೇ ಸಂಚಿಕೆಯಿಂದ ಸೆಪ್ಟೆಂಬರ್ ಸಂಚಿಕೆವರೆಗಿನ ಪ್ರಬುದ್ಧಭಾರತದ ಸಂಪಾದಕೀಯಗಳಲ್ಲಿ ವಿವರಿಸಿರುವಷ್ಟು ಸ್ಪಷ್ಟವಾಗಿ ಬೇರಲ್ಲೂ ವಿವರಿಸಿಲ್ಲ. ಅದರ ಒಂದು ಸಾರವನ್ನು ಈ ಕೆಳಗೆ ಉಲ್ಲೇಖಿಸಿದೆ:

''ವಿಶ್ವದ ಜೀವನ ನಾಟಕದಲ್ಲಿ ಪಾತ್ರವಹಿಸುವುದೇ ವೈದಿಕ ಅರ್ಥದಲ್ಲಿ 'ಯಜ್ಞ' ಎನ್ನಬಹುದು. ಊರ್ಧ್ವಗಾಮೀ ಅಭೀಪ್ಸೆಯನ್ನು ಮನದಲ್ಲಿ ತುಂಬಿಕೊಂಡು, ಉಳಿಸಿಕೊಂಡು, ನಮ್ಮ ಸಮಸ್ತ ಜೀವನವನ್ನು ಒಂದು ಯಜ್ಞವಾಗಿ ಪರಿವರ್ತಿಸಿ, ವಿಶ್ವದ ಸೃಜನ ಚೇತನಕ್ಕೆ ಸಂಪೂರ್ಣವಾಗಿ ಶರಣಾಗಿರುವುದಷ್ಟೆ ನಾವು ಮಾಡಬೇಕಾದುದು. ಹಾರೈಕೆ-ಅಭೀಪ್ಸೆಯಷ್ಟೆ ನಮ್ಮದು. ಎಲ್ಲವನ್ನೂ ಮಾಡುವುದು ಆ ದಿವ್ಯಶಕ್ತಿಯೆ. ವಿಕಾಸ ಎಂಬುದು ವ್ಯಷ್ಟಿಕ್ರಿಯೆಯಲ್ಲ. ಅದು ಸಮಷ್ಟಿಕ್ರಿಯೆ. ಆಧ್ಯಾತ್ಮಿಕ ಪ್ರಗತಿಗೆ ಬೇಕಾದ ಶಕ್ತಿಯೆಲ್ಲ ವಿಶ್ವ ಜೀವನದಿಂದ ಬರುತ್ತದೆ. ಯಜ್ಞಮುಖೇನ ನಾವು ಅದಕ್ಕೆ ನಮ್ಮನ್ನು ನಾವು ಪೂರ್ಣವಾಗಿ ತೆರೆದುಕೊಳ್ಳಬೇಕು, ಅಷ್ಟೆ. ಆಗ ಅಗತ್ಯವಾದ ಬದಲಾವಣೆಗಳೂ ತಮಗೆ ತಾವೇ ಆಗುತ್ತವೆ, ನಮ್ಮ ವಿಕಾಸದ ಉತ್ಸಾಹವನ್ನು ಹೆಚ್ಚಿಸುತ್ತದೆ. ಆಧ್ಯಾತ್ಮಿಕ ವಿಕಾಸವನ್ನು ಉದ್ದೀಪನ ಗೊಳಿಸಲು ಬೇಕಾದ ಇಂಧನವೆಲ್ಲ ವಿಶ್ವಜೀವನದಲ್ಲಿದೆ. ಈ ಜ್ವಾಲೆಗಳನ್ನು ಬೆಳೆಸಲೊಂದು ಯಜ್ಞಕುಂಡವಷ್ಟೆ ನಮಗೆ ಬೇಕಾದುದು.

ತಾವೊ ತೆ ಚಿಂಗ್ ''ಮಾರ್ಗ''ವು ಪ್ರಕಾರ **ವು-ವಿ** (ಭಾಷಾಂತರಿಸಿ ಹೇಳುವುದಾದರೆ, ವಿಶ್ವಸಂಕಲ್ಪಕ್ಕೆ ಸ್ವ ಇಚ್ಛೆಯನ್ನು ಜೋಡಿಸುವುದು, ಎಂದು.) **ಝೆರಾನ್** (ಸಹಜತೆ, ಶರಣಾಗತಿ, ತನ್ನಷ್ಟಕ್ಕೇ ಉದ್ಭವಿಸುವ ಉತ್ಸಾಹ) **ಪು** (ಮತ್ತೆ ಮೂಲ ಸ್ಥಿತಿಗೆ ಹಿಂತಿರುಗುವುದು) ಮತ್ತು **ಸಾನ್‌ಚೀವೊ** (ಅನುಕಂಪೆ, ಮಿತ, ಮತ್ತು ನಿರಹಂಕಾರ- ನಮ್ರತೆ) – ಇವುಗಳನ್ನೊಳಗೊಂಡಿದೆ.[೯] ಮೂಲತಃ ತಾವೋ ಧರ್ಮ ಒಂದು ತತ್ತ್ವ ಮಾತ್ರ. ಅದಕ್ಕೆ ಆಧಾರ ಲಾವೊತ್ಸೆಯ **ತಾವೊ ತೆ ಚಿಂಗ್** ಮತ್ತು ಅದೇ ತರಹದ '**ಜೂ ಆಂಗ್ ಝಿ**' ಎಂಬ ಮೂಲಕೃತಿ. ಝು ಆಂಗ್ ಝಿ ಎಂಬ ಹೆಸರಿನ ಒಬ್ಬ ವ್ಯಕ್ತಿ ಕ್ರಿ.ಪೂ. ೪ನೆ ಶತಮಾನದವನು. ಕ್ರಿ.ಶ. ೨ನೆ ಶತಮಾನದಲ್ಲಷ್ಟೆ[೧೦] ತಾವೊಯಿಜಂ ಒಂದು ಧಾರ್ಮಿಕ ಸಂಸ್ಥೆಯಾದುದು. 'ಝುಂಗ್ ಡಾವೊ ಲಿಂಗ್' (ದೇವ ಗುರುಗಳ ಮಾರ್ಗ)ಎಂಬ ನೂತನ ಧರ್ಮ ಸ್ಥಾಪನೆ ಆದಾಗಿನಿಂದ ಈ ಧರ್ಮದಲ್ಲಿ, ಪೂಜಾವಿಧಿಗಳು, ರಸವಿದ್ಯೆ, ತಂತ್ರ-ಮಂತ್ರ ಭೂತೋಚ್ಚಾಟನೆ, ಪುರಾಣಗಳು, ಅಂದಿನ ನಂಬಿಕೆಗಳು, ಜ್ಯೋತಿಷ್ಯ ಮುಂತಾದುವೆಲ್ಲ ಸೇರಿಕೊಂಡಿವೆ. ಕೇವಲ ವೈಚಾರಿಕ, ನೈತಿಕ ಸಂಹಿತೆಯಾಗಿ ಆರಂಭವಾದ ಅಮೂರ್ತ ಸಿದ್ಧಾಂತದ ಲಾ ವೊತ್ಸೆ, ಅದು ಹೇಗೆ ರಸವಿದ್ಯೆ, ಮಾಟ-ಮಂತ್ರ, ಜೋತಿಷ್ಯ, ಇತ್ಯಾದಿಗಳ ಕಲಬೆರಕೆ ಆಯಿತು ಎಂಬುದೇ ಬೇರೊಂದು ದೊಡ್ಡಕಥೆ. ಅದನ್ನೆಲ್ಲ ವಿವರವಾಗಿ ಬರೆಯಹೊರಟರೆ ಅದೇ ಒಂದು ಗ್ರಂಥವಾದೀತು. ಈಗಿನ ತಾವೊಧರ್ಮದಲ್ಲಿಯಂತೂ ಬಹಳಷ್ಟು ಜ್ಯೋತಿಷ್ಯಶಾಸ್ತ್ರ ರಸವಿದ್ಯೆ, (ದೀರ್ಘಾಯುಷ್ಯಕ್ಕೆ) ಅಷ್ಟಸಿದ್ಧಿ ಸಾಧನೆ, ಅನುಭಾವ[೧೧]

---

೬. ಬ್ರಹ್ಮ ಎಂಬ ಪದದ ಮೂಲಧಾತು ಬೃಹ್(ದೊಡ್ಡದು)

೭. **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ** *(ತೈ.ಉಪ ೨.೩)* **ನಾಸದಾಸೀತ್ ನೋ ಸದಾಸೀತ್** – 'ಆಗ ಶೂನ್ಯವೂ ಇರಲಿಲ್ಲ ಅಸ್ತಿತ್ವವೂ ಇರಲಿಲ್ಲ' – *ನಾಸದೀಯ ಸೂಕ್ತ – ೧*) **ತಸ್ಮಾದಸತಃ ಸಂಜಾಯತ** – 'ಅಸತ್‌ನಿಂದ ಸತ್ ಹುಟ್ಟಿತು' *(ಛಾಂ. ಉಪ ೬.೨.೧.)* ಮತ್ತು ಶಾಂತಿಮಂತ್ರ '**ಪೂರ್ಣಮದಃ ಪೂರ್ಣಮಿದಂ** ...' – 'ಅದೂ ಪೂರ್ಣ ಇದೂ ಪೂರ್ಣ; ಪೂರ್ಣದಿಂದ ಪೂರ್ಣ ಹೊಮ್ಮುತ್ತದೆ., ಪೂರ್ಣದಿಂದ ಪೂರ್ಣವನ್ನು ತೆಗೆದರೂ ಪೂರ್ಣವೇ ಉಳಿಯುತ್ತದೆ.'

೮ ರಾಮಕೃಷ್ಣ, ಜಿ., *Origin and Growth of the Concept of Ṛta in Vedic Literature.* (1965)., ಡಾಕ್ಟರೇಟ್ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಉಲ್ಲೇಖ: http://en.wikipedia.org/wiki/Rta.

೯ *The Encyclopaedia of Religion and Ethics* ೧೩ ಸಂಪುಟಗಳಲ್ಲಿ; ಸಂ. ಹೇಸ್ಟಿಂಗ್ಸ್ ಜೇಮ್ಸ್ (೧೯೯೪, ೨ನೇ ಅಂತರರಾಷ್ಟ್ರೀಯ ಆವೃತ್ತಿ); ಸಂಪುಟ ೧೨, ಪು. ೧೯೭) ಪ್ರಕಾಶನ: ಎಡಿನ್‌ಬರ್ಗ್, ಟಿ ಅಂಡ್ ಟಿ ಕ್ಲಾರ್ಕ್.

೧೦ *Zhuangzi* (ಪುಸ್ತಕ);(೨೦೧೪) *Wikipedia*ದಲ್ಲಿ *http://en.wikipedia.org/wiki/Zhuangzi_(book)* ೨೮ ಜೂನ್ ೨೦೧೪ರಂದು ಇದು ಲಭಿಸಿತು.

೧೧. ಇವುಗಳನ್ನೆಲ್ಲ ಒಳಗೊಳ್ಳಲು ಪ್ರಾಯಶಃ ಈ ಮುಂದೆ ಕಾಣಿಸಿರುವ ಅಂಶಗಳು ಕಾರಣವಿರಬಹುದು: ತಾವೊ ಅನಂತ, ಶಾಶ್ವತ ಹಾಗೂ ಅಮರವಾದುದು. ಅದಕ್ಕೆ ಸಾವಿಲ್ಲ , ಹುಟ್ಟಿಲ್ಲ. *(ಅಧ್ಯಾಯ ೪, ೭, ೧೪ – ತಾವೊ ತೆ ಚಿಂಗ್)* ಸಾವಿಲ್ಲದಿರಲು ಹಾಗೂ ಅಮರತ್ವಕ್ಕೆ ಅಮೃತವನ್ನು ತಯಾರು ಮಾಡುವ ರಸವಿದ್ಯೆಯೊ ಬೇರೆ ಯಾವುದಾದರೂ ವಿಧಾನವೊ ಪ್ರಯೋಗಿಸಲ್ಪಟ್ಟಿರಬೇಕು. ಇತಿಹಾಸಪೂರ್ವದ ಜಾನಪದ ಧರ್ಮಾಚರಣೆಗಳು , ಸಂಪ್ರದಾಯಗಳು ಚೀನಾದಲ್ಲಿ, ವಿಶೇಷವಾಗಿ '**ವು**', ಹಾಗೂ '**ಫಾಂಗ್ ಶಿ**' (ಅತೀತವಾದ ದೈವಿಕ ಶಕ್ತಿ ಪೂಜೆ, ವಾಮಾಚಾರಗಳಲ್ಲಿ, ಮಂತ್ರ-ತಂತ್ರಾದಿಗಳ ಔಷಧಿ ಚಿಕಿತ್ಸೆಗಳಲ್ಲಿ, ಸಂಜೀವಿನಿ ವಿದ್ಯೆ, ಗ್ರಹಬಲ-ಜೋತಿಷ್ಯ, ಮೈಮೇಲೆ ದೇವರು ಬರುವುದು, ದುಷ್ಟಶಕ್ತಿಗಳ ಉಚ್ಚಾಟನೆ, ಪ್ರೇತ ಪೂಜೆ, ಮಾಯಾಮಂತ್ರ-ಯಕ್ಷಿಣಿ-ಇಂದ್ರಜಾಲ – ಮುಂತಾದವುಗಳು) ತಾವೊ ಧರ್ಮಾಚರಣೆಯಲ್ಲಿ ಸೇರಿಕೊಂಡಿರಬೇಕು. ದೈನಂದಿನ ಬದುಕಿನ ಕಷ್ಟಕಾರ್ಪಣ್ಯಗಳಲ್ಲಿ ಸಿಕ್ಕಿಕೊಂಡ ಸಾಮಾನ್ಯ ಜನ, ತಾವೊ ತೆ ಚಿಂಗ್ ಧರ್ಮದ ಅಮೂರ್ತ ಹಾಗೂ ಸೂಕ್ಷ್ಮ ತತ್ತ್ವ ವಿಚಾರಗಳನ್ನು ಅರ್ಥಮಾಡಿಕೊಳ್ಳಲಾರದೆ ಹೋದರು. ಇದರಿಂದ ತಾತ್ತ್ವಿಕತೆಯ ಆಧ್ಯಾತ್ಮಿಕತೆ ಇನ್ನೂ ದೂರ ಉಳಿಯಿತು. ಇಷ್ಟು ಸಾಲದು ಎಂಬಂತೆ ಚಕ್ರವರ್ತಿಗಳು ತಾವೊ ತತ್ತ್ವ ವಿಚಾರಗಳನ್ನು ತಮ್ಮ ಅನುಕೂಲಕ್ಕೆ ಲಾಭಕ್ಕೆ ತಕ್ಕಂತೆ ತಿರುಚಿದರು. ಉದಾಹರಣೆಗೆ ಕ್ವಿನ್ ಷಿ ಹ್ಯುಯಾಂಗ್, ಚಿನ್ ವಂಶದ ಮೊದಲ ಚಕ್ರವರ್ತಿ(ಕ್ರಿ.ಪೂ.೨೨೧-೨೧೦) ಟೆರ್ರಾಕೋಟ್ಟಾ(ಮಣ್ಣಿನ) ಸೈನಿಕರ ಸೇನೆಯ ನಗರವನ್ನೇ ತನ್ನ ಸಮಾಧಿಯ ಬಳಿ ಕಟ್ಟಿಸಿದ. ತಾನು ಪರಲೋಕವಾಸಿಯಾದಾಗ ತನ್ನ ರಕ್ಷಣೆಗೆ, ಬೆಂಬಲಕ್ಕೆ ಆ ಸೇನೆ ಇರಲಿ ಎಂಬುದಕ್ಕಾಗಿ. ಅಮೃತವನ್ನು ಹುಡುಕಿ ತನ್ನಿ ಎಂದು ದೂತರನ್ನು ಕಳಿಸುವವರೆಗೂ ಅವನು ಹೋದ. ಹಾನ್ ರಾಜಮನೆತನದ ಸಾಮ್ರಾಟ್ ವು (ಕ್ರಿ.ಪೂ.೧೪೧-೮೭) ಸ್ಪರ್ಶಮಣಿಯನ್ನು ಪಡೆಯಲು ಅನೇಕ ವಿಫಲ ಯತ್ನಗಳನ್ನು ಮಾಡಿದ. ಎಲ್ಲಕ್ಕೂ ಮೀರಿ, ತಾವೊ ಧರ್ಮವನ್ನು ಸುವ್ಯವಸ್ಥಿತವಾಗಿ ಸ್ಥಾಪನೆ ಮಾಡಿದ ಝೂಂಗ್ ಡಾವೊಲಿಂಗ್ (ಕ್ರಿ.ಪೂ. ೧೪೨) ಸಾಂಸಾರಿಕ, ಆರ್ಥಿಕ ತೊಂದರೆಗಳಿಂದ ನರಳುತ್ತಿದ್ದು, ದೀರ್ಘಾಯುಷ್ಯ, ರಸವಿದ್ಯೆ, ಮಂತ್ರತಂತ್ರ ಚಿಕಿತ್ಸೆ, ಯಕ್ಷಿಣಿ, ಇಂದ್ರಜಾಲ, ದೆವ್ವಬಿಡಿಸುವುದು ಇವುಗಳಲ್ಲಿಯೇ ಮುಳುಗಿದ್ದ; ಲಾವೊತ್ಸೇನೆ ಸಾಕ್ಷಾತ್ತಾಗಿ ತನ್ನ ಬಳಿ ಬಂದು ಧಾರ್ಮಿಕ ಆಚರಣೆಗಳ ಪಟ್ಟಿಯನ್ನೇ ಕೊಟ್ಟನೆಂದು ಹೇಳುತ್ತಾನೆ. (ನೋಡಿ: ದಾವೊಜಿಯಂ ಫಾಂಗ್ಷಿ (೨೦೦೫), *The Encyclopaedia of Religion,* ೧೫ ಸಂಪುಟಗಳಲ್ಲಿ (೨ನೆ ಆವೃತ್ತಿ, ಸಂಪುಟ ೪, ಪು.೨೧೮೭; ಮತ್ತು ಸಂಪುಟ ೫, ಪು.೨೯೮೯. ಪ್ರಕಾಶನ: ಕ್ರಮವಾಗಿ ಮಿಚಿಗನ್‌ನ *Gale* ಹಾಗೂ *Cengage Learning*)

ಅಥವಾ ಅತೀಂದ್ರಿಯ ಅಂಶಗಳ ಜೊತೆಗೆ ಗ್ರಂಥ ಪಠನವೂ ಸೇರಿಕೊಂಡಿದೆ.

ತಾವೊ ಧರ್ಮಕ್ಕೆ ಅನುಯಾಯಿಗಳೂ (ಹಿಂದಿನಿಂದಲೂ ಈ ಧರ್ಮಕ್ಕೆ ಸೇರಿದವರಾಗಿ) ಇದ್ದಾರೆ, ದೀಕ್ಷೆಪಡೆದು ಹೊಸದಾಗಿ ಸೇರಿದವರೂ ಇದ್ದಾರೆ. ದೀಕ್ಷೆ ಪಡೆದು ಪುರೋಹಿತರೋ ಅರ್ಚಕರೋ ಆದವರು ಗೃಹಸ್ಥರೂ ಆಗಿರಬಹುದು (ಝೆಂಗ್‌ಯಿ), ಇಲ್ಲವೆ ವಿರಕ್ತರೂ ಆಗಿರಬಹುದು (ಕ್ವಾನ್ಝೆನ್). ವಿರಕ್ತರಾದವರು ಬ್ರಹ್ಮಚಾರಿಗಳಾಗಿರುತ್ತಾರೆ. ಶಾಕಾಹಾರಿಗಳು ಮಠಗಳಲ್ಲಿ ವಾಸಮಾಡುತ್ತಾರೆ (ಉದಾಹರಣೆಗೆ ಬೀಜಿಂಗ್‌ನಲ್ಲಿರುವ ಶ್ವೇತ ಮೇಘ ಮಠ). ಈಗಿನ ತಾವೋದಲ್ಲಿ ಸದ್ಯಕ್ಕೆ ವಿರಾಗಿಣಿಯರಿಲ್ಲ. ಗೃಹಸ್ಥ ಮಠದವರು ತಮ್ಮ ತಮ್ಮ ಮನೆಗಳಲ್ಲೇ ಪೂಜೆ, ಪಾಠ, ವಿಧಿಗಳನ್ನು ಮಾಡುತ್ತಾರೆ. ಹೆಚ್ಚು ಸಮಯವನ್ನು ತಾಯಿತಗಳನ್ನು ಮಾಡುವುದರಲ್ಲಿ ಮತ್ತು ಮಾರುವುದರಲ್ಲಿ ಕಳೆಯುತ್ತಾರೆ. (ತಾಯಿತವನ್ನು 'ಫು' ಎನ್ನುತ್ತಾರೆ. ಇವು ಅಂಗಡಿ ಬೀದಿಗಳಲ್ಲೂ ಲಭಿಸುತ್ತವೆ.)

ನಮ್ಮ ಪ್ರವಾಸ ಮುಂದುವರಿದಂತೆ ಈ ಲೇಖಕ ಹೋಗಿದ್ದ ಪುಣ್ಯಕ್ಷೇತ್ರಗಳ ವಿಚಾರವನ್ನೀಗ ನೋಡೋಣ :



### ಮಾವೊಷಾನ್ ಪರ್ವತ:


ಕ್ರಿ.ಪೂ. ೧೫೩ ರಿಂದ ತಾವೊ ಧರ್ಮಕ್ಕೆ ಆಶ್ರಯ ಕೊಟ್ಟಿರುವ ಈ ಪರ್ವತ ನ್ಯಾನ್‌ಜಿಂಗ್ ಬಳಿ ಇದೆ. ಬೆಟ್ಟದ ಮೇಲೆ ೫೦ ಕಿ.ಮೀ. ಫಾಸಲೆಯಲ್ಲಿ ಹಲವಾರು ದೇವಸ್ಥಾನಗಳೂ ಮಠಗಳೂ ಇವೆ. ಮುಖ್ಯವಾದ ಚೋಂಗ್ ಷೌ ದೇಗುಲದಲ್ಲಿ, ತಾವೊ ದೇವರ ಮೂರು ಪರಿಶುದ್ಧ ಪ್ರಕಟರೂಪಗಳು, ಎಲ್ಲ ಜೀವಿಗಳ ಸೃಷ್ಟಿಗೆ ಕಾರಣರಾದ, ದೈವೀ ಶಕ್ತಿ[೧೨]ಗಳೆಂದು ಆರಾಧಿಸಲ್ಪಡುತ್ತಿವೆ. ತಾವೊ ಧರ್ಮದ ಷ್ಯಾಗ್‌ಕ್ವಿಂಗ್ ಪಂಗಡದ ತೊಟ್ಟಿಲು ಸಹ ಈ ಪರ್ವತ. ಈ ಪಂಥ ರಸವಿದ್ಯೆ, ತಾಯಿತ-ತಂತ್ರಮಂತ್ರಗಳ ಬಳಕೆಗೆ ಬದಲು ಧ್ಯಾನ ವಿಧಾನ-ಸಾಧನೆಗಳಿಗೆ ಬೆಲೆ ಕೊಡುತ್ತದೆ. ಹೀಗಿದ್ದರೂ ಶತಶತಮಾನ ಕಾಲ ಪ್ರಗತಿ ಹೊಂದಿದ್ದರೂ, ಇಲ್ಲಿಯೂ ಸಂಪ್ರದಾಯವೇ ಮೇಲ್ಗೈಯಾಗಿ, ಅಂತ್ರತಂತ್ರ ಮತ್ತು ಬಾಹ್ಯಾಚರಣೆಗಳೇ ಮುಖ್ಯವೆನಿಸಿವೆ. ಈ ಕ್ಷೇತ್ರಗಳಲ್ಲಿ ಈಗ ಪುರೋಹಿತರು ಜೋತಿಷ್ಯ ಹೇಳುವುದು, ಮಂತ್ರದ ತಾಯಿತಗಳನ್ನು ಸಿದ್ಧಪಡಿಸುವುದು, ಮಾರುವುದು ಇದರಲ್ಲೇ ಮುಳುಗಿರುವುದನ್ನು ಕಾಣಬಹುದು. ಇದೇ ಪರ್ವತದ ಇನ್ನೊಂದು ಗಿರಿಯ ತಾಣ, ಅಂತ್ರ ತಾಯಿತಗಳ ತೌರು ಎನ್ನಬಹುದಾದ 'ಅನಾದಿ ತಾವೊ ಚೌಕ'ದಲ್ಲಿ ೩೩ ಮೀಟರ್ ಎತ್ತರದ ಚಿನ್ನದ ಲೇಪವಿರುವ, ಲಾವೋ ತ್ಸುನ ಕಂಚಿನ ವಿಗ್ರಹ ಪ್ರಸಿದ್ಧವಾದುದು.



### ಲಾವೊಷಾನ್ ಪರ್ವತ

ಲಾವೊಷಾನ್ ಗಿರಿ ಚೀನಾದ ಪೂರ್ವ ಕರಾವಳಿಯಲ್ಲಿ ಕ್ವಿಂಗ್ ಡಾವ್ ಬಳಿ ಇದೆ. ತಾವೊ ಧರ್ಮದ ಶಾಖಾಮಠವಾದ 'ಕ್ವಾನ್ ಝೆನ್ ತಾವೊಧರ್ಮ' ಬೆಳೆದುದು ಇಲ್ಲಿಯೆ. ಸುಪ್ರಸಿದ್ಧ ಬೌದ್ಧ ವಿದ್ವಾಂಸನಾದ ಫ್ಯಾಕ್ಸಿಯಾನ್ (ಕ್ರಿ.ಶ. ೩೩೭-೪೨೨) ಭಾರತದಿಂದ ಹಿಂತಿರುಗಿದ ಮೇಲೆ ತಂಗಿದ್ದು ಇಲ್ಲಿಯೆ. ಗ್ರಾನೈಟ್ ಬಂಡೆಗಳ ಈ ಇಡೀ ಗಿರಿಯನ್ನು ಈಗ ಅಂದಗೊಳಿಸಲಾಗಿದೆ. ಇದು ಸುಂದರ ಚೇತೋಹಾರಿ ದೃಶ್ಯಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ತಪ್ಪಲಿನಿಂದ ಶಿಖರದವರೆಗೆ ಹೋಗಲು ಕೇಬಲ್ ಕಾರು ಸಹ ಇದೆ. ಪಾದಚಾರಿಗಳಿಗೆ ಅನುಕೂಲವಾಗುವಂತೆ ಯಂತ್ರದಿಂದ ಕತ್ತರಿಸಿ ಇಟ್ಟ ಮೆಟ್ಟಿಲುಗಳಿವೆ. ಹತ್ತುವುದಕ್ಕೆ ಸುಲಭವಾಗುವಂತೆ ಆಸರೆಯಾಗಿ ರೇಯ್ಲಿಂಗ್ ಇದೆ. ಮೆಟ್ಟಿಲುಗಳ ಮೇಲೆ ಅರಳಿದ ಕಮಲಗಳನ್ನು ಕೆತ್ತಿದ್ದು, ಅದರ ಮೇಲೆ ಹೆಜ್ಜೆಯಿಟ್ಟು ಹತ್ತಬಹುದು. ಸುತ್ತ ಹಸಿರ ವನಸಿರಿ, ಬೃಹದಾಕಾರದ ಬಂಡೆಗಳು. ಆ ಎತ್ತರದಿಂದ ನೋಡಿದರೆ ಕಾಣುವ ದೂರದ ಸಾಗರ, ನೋಡುವುದೇ ಚಂದ. ಅಲ್ಲಿ ಹತ್ತಿಕೊಂಡು ಹೋಗುವುದೇ ಒಂದು ಆನಂದದ ಅನುಭವ.

ಈ ಬೆಟ್ಟದಲ್ಲಿ ಎಲ್ಲ ರೋಗಗಳನ್ನೂ ಗುಣಪಡಿಸುವಂತಹ ಔಷಧಿ ಗಿಡಗಳು, ಗಿಡಮೂಲಿಕೆಗಳು, ಸಂಜೀವಿನಿ ಗಿಡ, ಇವೆಯೆಂದು ಪ್ರತೀತಿ. ಈ ಸಂಜೀವಿನಿ ಗಿಡಗಳನ್ನು ಹುಡುಕಿಕೊಂಡು ಕ್ವಿನ್ ಷಿ



---

೧೨. ತಾವೊ ತೆ ಚಿಂಗ್, ಅಧ್ಯಾಯ ೪೨, ''ತಾವೊ ಮೊದಲು ಒಂದನ್ನು ಸೃಷ್ಟಿಸಿತು. ಆ ಒಂದು ಎರಡನ್ನು ಸೃಷ್ಟಿಸಿತು. ಆ ಎರಡು ಮೂರನ್ನು ಸೃಷ್ಟಿಸಿತು. ಆ ಮೂರು ಉಳಿದೆಲ್ಲವನ್ನೂ ಸೃಷ್ಟಿಸಿದವು. ಈ ತಿಳಿವಿನಿಂದ ಮೂರು ಪರಿಶುದ್ಧಾತ್ಮರ ಪೂಜೆ ಆರಂಭವಾಯಿತು. ಈ ಮೂವರಲ್ಲಿ ಮುಖ್ಯರಾದ ದೇವರೆಂದರೆ ಯುವಾಂಷಿ ತಿಯಾನ್‌ಝುನ್ (ಆದಿ ಪುರುಷ) ಸೃಷ್ಟಿಕರ್ತ.'' ಈ ತ್ರಿಮೂರ್ತಿಯನ್ನು ಕ್ರೈಸ್ತ ಧರ್ಮದ ತ್ರಿಮೂರ್ತಿ, ಹಿಂದೂ ಧರ್ಮದ ತ್ರಿಮೂರ್ತಿ ಇವುಗಳೊಂದಿಗೆ ಹೋಲಿಸಿ.